## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಕೋಟೆ-562114

ದಿನಾಂಕ:06.11.2019 ರಂದು ಬುಧವಾರ ಬೆಳಿಗ್ಗೆ 12.00 ಗಂಟೆಗೆ ಸಮಿತಿಯ ಅಧ್ಯಕ್ಷರಾದ **ಶ್ರೀ.ಕೆ.ಸತೀಶ್** ಇವರ ಅಧ್ಯಕ್ಷತೆಯಲ್ಲಿ ಸಮಿತಿಯ ಕಛೇರಿಯ ಸಭಾಂಗಣದಲ್ಲಿ ನಡೆದ ಸಮಿತಿಯ ಸಾಮಾನ್ಯ ಸಭೆಯ ನಡವಳಿಗಳು.

| ಕ್ರ. ಸಂ | ಹಾಜರಿದ್ದ ಸದಸ್ಯರುಗಳು ಶ್ರೀಯುತ/ಶ್ರೀಮತಿ | | ಕ್ರ. ಸಂ | ಗೈರು ಹಾಜರಾದ ಸದಸ್ಯರುಗಳು ಶ್ರೀಯುತ/ಶ್ರೀಮತಿ | |
|---|---|---|---|---|---|
| 1 | ಕೆ.ಸತೀಶ್ | ಅಧ್ಯಕ್ಷರು | 1 | ಶ್ರೀರಾಮಪ್ಪ | ಸದಸ್ಯರು |
| 2 | ಕಾಂತಮ್ಮ(ಎಸ್.ಟಿ.ಎಂ) | ಉಪಾಧ್ಯಕ್ಷರು | 2 | ಕೆ.ಎಂ.ವಸುಂಧರಾ.ಉ.ನಿ. | ಇಲಾಖಾ ಪ್ರತಿನಿಧಿ |
| 3 | ಹೆಚ್.ಕೆ.ದೇವರಾಜ್ | ಸದಸ್ಯರು | | | |
| 4 | ಶಿವಪ್ಪ | ಸದಸ್ಯರು | | | |
| 5 | ಕೆ.ಮುನಿರಾಜು | ಸದಸ್ಯರು | | | |
| 6 | ಡಿ.ಟಿ.ವೆಂಕಟೇಶ್ | ಸದಸ್ಯರು | | | |
| 7 | ಕೆ.ಆರ್.ಶಿವಕುಮಾರ್ | ಸದಸ್ಯರು | | | |
| 8 | ಶ್ರೀ ಕೆ.ಬಿ.ಆಂಜಿನಪ್ಪ | ಸದಸ್ಯರು | | | |
| 9 | ಹೆಚ್.ಎನ್.ಧರ್ಮೇಶ್ | ಸದಸ್ಯರು | | | |
| 10 | ಎಂ.ದೇವರಾಜು | ಸದಸ್ಯರು | | | |
| 11 | ಜೆ.ವಿ.ರವಿಶಂಕರ್ | ವರ್ತಕರ ಪ್ರತಿನಿಧಿ | | | |
| 12 | ಸಿ.ಮುನಿಯಪ್ಪ | ತಾ.ವ್ಯಾ.ಮಾ.ಸ.ಸಂ ಪ್ರತಿನಿಧಿ | | | |

| | |
|---|---|
| ವಿಷಯ:1) | **ಸಮಿತಿಯ ಹಿಂದಿನ ಸಭೆಯ ನಡವಳಿಗಳನ್ನು ಓದಿ ಒಪ್ಪಿ ರೆಕಾರ್ಡ್ ಮಾಡುವ ವಿಚಾರ.** |
| ತೀರ್ಮಾನ | ದಿನಾಂಕ:20.08.2019 ರಂದು ನಡೆದ ಸಮಿತಿಯ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು. |
| ವಿಷಯ:2) | **2019-20ನೇ ಸಾಲಿನ ಆಗಸ್ಟ್-2019 ಮತ್ತು ಸೆಪ್ಟೆಂಬರ್-2019 ಮಾಹೆಗಳ ಜಮಾ- ಖರ್ಚು ಹಾಗೂ ಆದಾಯ-ವೆಚ್ಚದ ತಃಖ್ತೆಗಳನ್ನು ಪರಿಶೀಲಿಸಿ ಒಪ್ಪುವ ವಿಚಾರ.** |
| ತೀರ್ಮಾನ | 2019-20ನೇ ಸಾಲಿನ ಆಗಸ್ಟ್-2019 ಮತ್ತು ಸೆಪ್ಟೆಂಬರ್-2019 ರ ಮಾಹೆಗಳ ಜಮಾ-ಖರ್ಚು ಹಾಗೂ ಆದಾಯ-ವೆಚ್ಚದ ತಃಖ್ತೆಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ:3) | **ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49ರಲ್ಲಿನ 9ಎಕರೆ 20ಗುಂಟೆ ಜಮೀನನ್ನು ಮಾನ್ಯ ತಹಶೀಲ್ದಾರರ್, ಹೊಸಕೋಟೆ ತಾಲ್ಲೂಕು ರವರು ಸಮಿತಿಗೆ ಹಸ್ತಾಂತರ ಮಾಡಿರುವ ಬಗ್ಗೆ.** |
| ತೀರ್ಮಾನ | ಈ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು, ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49ರಲ್ಲಿನ 9ಎಕರೆ 20ಗುಂಟೆ ಜಮೀನನ್ನು ಮಾನ್ಯ ತಹಶೀಲ್ದಾರರ್, ಹೊಸಕೋಟೆ ತಾಲ್ಲೂಕು ರವರು ಸಮಿತಿಗೆ ಹಸ್ತಾಂತರಿಸಿರುವುದನ್ನು ಪರಿಶೀಲಿಸಲಾಗಿ ಮಾನ್ಯ ತಹಶೀಲ್ದಾರ್ ರಿಂದ ಜಮೀನಿನ ಹದ್ದುಬಸ್ತು ಹಾಗೂ Boundry Fixation ಮಾಡಿಕೊಳ್ಳುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ:4) | **ಉಪ್ಪಾರಹಳ್ಳಿ ಶ್ರೀ ಮದ್ದೂರಮ್ಮ ಜಾತ್ರೆಯಲ್ಲಿ ಭಾಗವಹಿಸುವ ಉತ್ತಮ ರಾಸುಗಳಿಗೆ ಬಹುಮಾನವನ್ನು ವಿತರಿಸಲು ಮಾನ್ಯ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸುವ ವಿಚಾರ.** |
| ತೀರ್ಮಾನ | ವಿಷಯವನ್ನು ಪರಿಶೀಲಿಸಲಾಯಿತು, ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ನಡೆಯುವ ಉಪ್ಪಾರಹಳ್ಳಿ ಮದ್ದೂರಮ್ಮ ಜಾನುವಾರು ಜಾತ್ರೆಯಲ್ಲಿ ಸೇರುವ ಉತ್ತಮ ರಾಸುಗಳಿಗೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಿಂದ ಮೂರು ಬಹುಮಾನಗಳನ್ನು ವಿತರಿಸುತ್ತಿದ್ದು ಸರಿಯಷ್ಟೇ ಆದರೆ ಉಪ್ಪಾರಹಳ್ಳಿ ಮದ್ದೂರಮ್ಮ ಜಾತ್ರೆಯು ರಾಸುಗಳಿಗೆ ವಿಶೇಷ ಆದ್ಯತೆ ನೀಡುವ ಜಾತ್ರೆಯಾಗಿದ್ದು ಸದರಿ ಜಾತ್ರೆಗೆ ಅನೇಕ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯದಿಂದಲೂ ವಿವಿಧ ಬಗ್ಗೆಯ ಜಾನುವಾರುಗಳಾದ ಕುರಿ, ಮೇಕೆ, ಹಸು, ಎಮ್ಮೆ ಹಾಗೂ ವಿಶೇಷವಾಗಿ ಎತ್ತುಗಳು |

| | |
|---|---|
| | ಪಾಲ್ಗೊಳ್ಳುವುದರಿಂದ, ಪ್ರತಿ ವರ್ಷದಂತೆ ನೀಡುತ್ತಿರುವ ಮೂರು ಬಹುಮಾನಗಳ ಜೊತೆಗೆ ಹೆಚ್ಚುವರಿಯಾಗಿ ಎರಡು ಬಹುಮಾನಗಳನ್ನು ಒಟ್ಟು ಐದು ಬಹುಮಾನಗಳನ್ನು ನೀಡಲು ಕೋರಿ ಪ್ರಸ್ತಾವನೆಯನ್ನು ಮಾನ್ಯ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ರವರಿಗೆ ಸಲ್ಲಿಸುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |
| ವಿಷಯ:5) | **ಹೊಸದಾಗಿ ಲೈಸನ್ಸ್ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಲೈಸನ್ಸ್ ಮಂಜೂರು ಮಾಡುವ ವಿಚಾರ.** |
| ತೀರ್ಮಾನ | ಹೊಸದಾಗಿ ಲೈಸನ್ಸ್ ಮಂಜೂರಾತಿ ಕೋರಿ ಬಂದಿರುವ ಈ ಕೆಳಕಂಡ ವರ್ಗಕ್ಕೆ ಲೈಸನ್ಸ್ ಮಂಜೂರಾತಿ ನೀಡಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |

| ಕ್ರ.ಸಂ | ಲೈಸನ್ಸ್ ಕೋರಿರುವ ಅರ್ಜಿದಾರ ಹೆಸರು & ವಿಳಾಸ | ಮಂಜೂರು ಮಾಡಲಾದ ಲೈಸನ್ಸಗಳ ವಿವರ. |
|---|---|---|
| 1. | ಮೆ//ಗ್ರಾನರಿ ಹೋಲ್‌ಸೇಲ್ ಪ್ರೈವೇಟ್ ಲಿಮಿಟೆಡ್, ಮಾಲೀಕರು: ಸುಕನ್ಯ ವಸಿಷ್ಠ, ಸರ್ವೆ ನಂ.93/4, NH207 ಹತ್ತಿರ, ಕೊರಳೂರು ಗ್ರಾಮ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-560067 | ಆಮದುದಾರರ/ರಫ್ತುದಾರರು/ ದಾಸ್ತಾನುದಾರರು/ಸಂಸ್ಕರಣಕಾರರು |
| 2. | ಮೆ//ಐಡಿಯಾ ಸೆಲ್ಯೂಷನ್ ಪ್ರೈವೇಟ್ ಲಿಮಿಟೆಡ್, ಎ.ಶ್ರವಣ್ ಕುಮಾರ್, ಸರ್ವೆ ನಂ.94/1,94/2, ಖಾತೆ ನಂ.199/1,199/2, ಕೊರಳೂರು ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-560067 | ಆಮದುದಾರರು/ರಫ್ತುದಾರರು/ ದಾಸ್ತಾನುದಾರರು/ಸಂಸ್ಕರಣಕಾರರು |
| 3. | ಮೆ//ಹೆಚ್.ಕೆ.ಜಿ.ಎನ್. ಟ್ರೇಡರ್ಸ್, ಮಾಲೀಕರು:ರಫೀಕ್ ಅಹ್ಮದ್, ಗಂಗಮ್ಮ ಗುಡಿ ರಸ್ತೆ, 1ನೇ ಅಡ್ಡ ರಸ್ತೆ, ವಿ.ವಿ.ಬಡಾವಣೆ, ಇಂಡಿಯಾ ಕ್ಲಿನಿಕ್ ಹತ್ತಿರ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562114 | ಚಿಲ್ಲರೆ ವರ್ತಕರು |
| 4. | ಮೆ//ಕೆ.ಜಿ.ಎನ್.ಟ್ರೇಡರ್ಸ್, ಮಾಲೀಕರು:ಯಾಸೀನ್, ಗಂಗಮ್ಮಗುಡಿ ರಸ್ತೆ, ಇಂಡಿಯಾ ಕ್ಲಿನಿಕ್ ಹತ್ತಿರ, ವಿ.ವಿ.ಬಡಾವಣೆ, ಹೊಸಕೋಟೆ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562114 | ಚಿಲ್ಲರೆ ವರ್ತಕರು |
| 5. | ಮೆ//ಹೆಚ್.ಎ.ರಾಮಮೂರ್ತಿ, ಮಾಲೀಕರು:ಹೆಚ್.ಎ.ರಾಮಮೂರ್ತಿ, ಲಕ್ಕೊಂಡಹಳ್ಳಿ ಗ್ರಾಮದ ಸರ್ವೆ ನಂ.167, ಶಂಕಣೀಪುರ ಗ್ರಾಮ, ಹೊಸಕೋಟೆ-ಸೂಲಿಬೆಲೆ ರಸ್ತೆಯ ಪಕ್ಕ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562114 | ಆಮದುದಾರರು/ ದಾಸ್ತಾನುದಾರರು |

<table>
<tr><td>ವಿಷಯ:6)</td><td>ಮೆ//ಮಹಾಂತೇಶ್ ಟ್ರೇಡರ್ಸ್, ಸಿ.ಮಹಾಂತೇಶ್ ರವರು ಲೀವ್ ಅಂಡ್ ಲೈಸನ್ಸ್ ಅವಧಿ ಮುಗಿದಿದ್ದು 11 ತಿಂಗಳುಗಳ ಅವಧಿಗೆ ಹಂಚಿಕೆ ಮಾಡುವ ವಿಚಾರ.</td></tr>
<tr><td>ತೀರ್ಮಾನ</td><td>ಈ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮೆ//ಮಹಾಂತೇಶ್ ಟ್ರೇಡರ್ಸ್, ಮಾಲೀಕರು: ಮಹಾಂತೇಶ್.ಸಿ ರವರ ಹಂಚಿಕೆ ಸೆಪ್ಟೆಂಬರ್-2019ರ ಅಂತ್ಯಕ್ಕೆ ಮುಗಿದಿದ್ದು ಸದರಿಯವರು ಸಮಿತಿಗೆ ಪಾವತಿಸಬೇಕಾದ ಬಾಕಿ LLF ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಲು ತಿಳಿಸಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು ಹಾಗೂ ಸಮಿತಿಯ ಉದ್ದೇಶಿತ ಮಾರುಕಟ್ಟೆಯಲ್ಲಿ ನಿರ್ಮಿಸಿರುವ 1 ಸಂಖ್ಯೆ 500MT ಗೋದಾಮು ಹೊಸಕೋಟೆ ಕೇಂದ್ರ ಸ್ಥಾನದಿಂದ ಸುಮಾರು 14km ದೂರವಿದ್ದು, ಗುಡ್ಡಗಾಡು ಪ್ರದೇಶವಾಗಿರುವುದರಿಂದ ಬೇಡಿಕೆ ಇರುವುದಿಲ್ಲ ಹಾಗೂ ಮೆ//ಮಹಾಂತೇಶ್ ಟ್ರೇಡರ್ಸ್ ರವರು ದಿನಾಂಕ:30-09-19 ರ ಮನವಿಯಲ್ಲಿ ಬಾಕಿ ಮೊತ್ತ ಪಾವತಿಸುವುದಾಗಿ ತಿಳಿಸಿರುವ ಮೇರೆಗೆ ಹಾಗೂ ಜುಲೈ-2019 ರ ಮಾಹೆಯ ವರೆಗೆ LLF & LLF ದಂಡ ಪಾವತಿಸಿದ್ದು, ಉಳಿದ ಆಗಸ್ಟ್-2019, ಸೆಪ್ಟೆಂಬರ್-2019ರ LLF & LLF ಫೀ & ದಂಡ ಹಾಗೂ ಏಪ್ರಿಲ್-2019 ರಿಂದ ಬಾಡಿಗೆಯ GST ಯನ್ನು ಪಾವತಿಸಲು ನೋಟೀಸ್ ನೀಡಿ ವಸೂಲಿ ಮಾಡಲು ತಿಳಿಸಿ, ಸದರಿಯವರಿಗೆ ಮುಂದಿನ 11 ತಿಂಗಳುಗಳಿಗೆ LLF ಆಧಾರದ ಮೇಲೆ 500MT ಗೋದಾಮನ್ನು ಹಂಚಿಕೆ ಮಾಡುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.</td></tr>
<tr><td>ವಿಷಯ:7)</td><td>ಸಮಿತಿಯು ಹಾಲಿ ಇರುವ ಬಾಡಿಗೆ ಕಟ್ಟಡ ಕರಾರು ಡಿಸೆಂಬರ್-2019ರ ಅಂತ್ಯಕ್ಕೆ ಮುಗಿಯುವ ವಿಚಾರ.</td></tr>
<tr><td>ತೀರ್ಮಾನ</td><td>ಈ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಮಿತಿಯು ಹಾಲಿ ಇರುವ ಬಾಡಿಗೆ ಕಟ್ಟಡದ ಕರಾರು ಡಿಸೆಂಬರ್-2019 ಅಂತ್ಯಕ್ಕೆ ಮುಗಿಯುವುದರಿಂದ ಮುಂದಿನ 2 ವರ್ಷಗಳಿಗೆ (ಜನವರಿ-2020 ರಿಂದ ಡಿಸೆಂಬರ್-2021) ರವರೆಗೆ ಬಾಡಿಗೆ ಕರಾರನ್ನು ಹಾಲಿ ಪಾವತಿಸುತ್ತಿರುವ ಮಾಸಿಕ ಬಾಡಿಗೆ ಆಧಾರದಂತೆ ಮುಂದುವರೆಸಲು ಕೋರಿ ಕಟ್ಟಡದ ಮಾಲೀಕರಾದ ವ್ಯವಸ್ಥಾಪಕರು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಹೊಸಕೋಟೆ ರವರಿಗೆ ಪತ್ರ ಮುಖೇನ ಕೋರಿ ನಂತರ ಸದರಿ ಕಟ್ಟಡ ಮಾಲೀಕರು ಅನುಮತಿಸಿದರೆ ಮುಂದಿನ 2 ವರ್ಷಗಳಿಗೆ (ಜನವರಿ-2020 ರಿಂದ ಡಿಸೆಂಬರ್-2021) ರವರೆಗೆ ಇದೇ ಕಟ್ಟಡದಲ್ಲಿ ಆಡಳಿತ ಕಛೇರಿಯನ್ನು ಮುಂದುವರೆಸಲು ಕೋರಿ ಪ್ರಸ್ತಾವನೆಯನ್ನು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.</td></tr>
<tr><td>ವಿಷಯ:8)</td><td>2018-19ನೇ ಸಾಲಿನಲ್ಲಿ ಭದ್ರತಾ ಸಿಬ್ಬಂದಿ ಏಜೆನ್ಸಿಯವರು ಶ್ರೀ ನಿಧಿ ಸೆಕ್ಯೂರಿಟಿ ಸರ್ವೀಸಸ್ ರವರ ಎಫ್.ಡಿ.ಯನ್ನು ಹಿಂದಿರುಗಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ಈ ವಿಷಯದ ಬಗ್ಗೆ ಚರ್ಚಿಸಿಲಾಯಿತು, 2017-18 ಮತ್ತು 2018-19ನೇ ಸಾಲಿನಲ್ಲಿ ಈ ಸಮಿತಿಗೆ ಭದ್ರತಾ ಸಿಬ್ಬಂದಿಯನ್ನು ಒದಗಿಸಿದ ಭದ್ರತಾ ಏಜೆನ್ಸಿಯವರಾದ ಶ್ರೀ ನಿಧಿ ಸೆಕ್ಯೂರಿಟಿ ಸರ್ವೀಸಸ್ ರವರು ಸದರಿ ಸಾಲಿನಲ್ಲಿ ಉತ್ತಮವಾದ ಭದ್ರತಾ ಸೇವೆಯನ್ನು ಒದಗಿಸಿದ್ದು, ಸದರಿಯವರಿಂದ ಸಮಿತಿಗೆ ಯಾವುದೇ ಬಾಕಿ ಇರುವುದಿಲ್ಲವೆಂಬ ಅಂಶವನ್ನು ಪರಿಶೀಲಿಸಲಾಗಿ ಹಾಗೂ ಈ ಸಮಿತಿಯಲ್ಲಿ ಭದ್ರತಾ ಏಜೆನ್ಸಿಯಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಗಳಿಗೆ ಸಂಪೂರ್ಣವಾಗಿ ಮಾಸಿಕ ಸಂಬಳವನ್ನು ನೀಡಿರುವುದಾಗಿ ಹಾಗೂ ಇ.ಫಿ.ಎಫ್ ಮತ್ತು ಇ.ಎಸ್.ಐ ಪಾವತಿಸಿರುವುದನ್ನು ಪರಿಶೀಲಿಸಲಾಯಿತು. ಸದರಿಯವರು ಸಮಿತಿಯಲ್ಲಿ ಹೂಡಿರುವ ಎಫ್.ಡಿ.ಯನ್ನು ಮಾಜಿ ಭದ್ರತಾ ಏಜೆನ್ಸಿಯಾದ ಶ್ರೀ ನಿಧಿ ಸೆಕ್ಯೂರಿಟಿ ಸರ್ವೀಸಸ್‌ರವರಿಗೆ ಹಿಂದಿರುಗಿಸುವಂತೆ ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>ವಿಷಯ:9)</td><td>ಸಮಿತಿಯ ಉಪಯೋಗಕ್ಕೆ UPS ಖರೀದಿಸಲು ದರಪಟ್ಟಿಗಳನ್ನು ಸ್ವೀಕರಿಸಿದ್ದು, ದರಪಟ್ಟಿಗಳನ್ನು ಪರಿಶೀಲಿಸುವ ವಿಚಾರ.</td></tr>
<tr><td>ತೀರ್ಮಾನ</td><td>ಈ ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸಮಿತಿಯ ಉಪಯೋಗಕ್ಕಾಗಿ UPS ಖರೀದಿಸಲು ಆಹ್ವಾನಿಸಿರುವ ದರಪಟ್ಟಿಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.<br>ದರಪಟ್ಟಿಗಳು ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ</th><th>ಹೆಸರು ಮತ್ತು ವಿಳಾಸ</th><th>ವಿಧ</th><th>ದರ</th><th>ಒಟ್ಟು</th></tr>
<tr><td>1</td><td>M/S ZS COMPUTERS & ID SOLUTIONS</td><td>2KVA INVERTOR, 150AH BATTERY,</td><td>43,200-</td><td>44,600-00</td></tr>
</table>
</td></tr>
</table>